ಶ್ರೀ ಡಿ.ಎ.ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ರೇವಣ್ಣನವರು ಹೇಳಿದಂಥ ವಿಚಾರವನ್ನು ಖಂಡಿತವಾಗಿ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ : ಸೂಕ್ತ ಕ್ರಮ ತೆಗೆದುಕೊಳ್ಳುವುದಲ್ಲ, ಒಂದು ನಿರ್ಣಯ ಮಾಡಿ, 5 ವರ್ಷದಿಂದ ರೈತರು ಸಂಕಷ್ಟದಲ್ಲಿದ್ದಾರೆ.

ಶ್ರೀ ಡಿ.ಎ.ಸದಾನಂದಗೌಡ : ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಪರಿಹಾರ ಕೊಡುತ್ತೀರಾ ಸರ್?

ಶ್ರೀ ಡಿ.ಎ.ಸದಾನಂದಗೌಡ : ಓ.ಕೆ.

2. ಶಾಸನ ರಚನೆ :

(ಅ) ವಿಧೇಯಕವನ್ನು ಮಂಡಿಸುವುದು

1) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2011 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2011 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಗಿದೆ.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :

2011ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು

ಪ್ರಸ್ತಾವದ ಪರವಾಗಿರುವವರು "ಹೌದು ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ, ಪ್ರಸ್ತಾವವು ಅಂಗೀಕೃತವಾಗಿದೆ

ಮಾನ್ಯ ಮಂತ್ರಿ ಅವರು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ – 1)

(ಆ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು (ಮುಂದುವರೆದುದು)

1) 2011ನೇ ಸಾಲಿನ ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ವಿಧೇಯಕ

(ಮುಂದುವರೆದ ಪರ್ಯಾಲೋಚನೆ)

ಶ್ರೀ ಎಸ್. ಸುರೇಶ್ ಕುಮಾರ್ (ಮುಖ್ಯಮಂತ್ರಿಗಳ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಉದ್ದೇಶ ಮತ್ತು ಮುಖ್ಯಾಂಶಗಳ ವಿವರಗಳನ್ನು ನಾನು ನಿನ್ನೆ ನೀಡಿದ್ದೇನೆ. ಮತ್ತೊಂದು ಸಾರಿ ವಿಧೇಯಕವನ್ನು ಪರ್ಯಾಲೋಚಿಸುವ ಸಂದರ್ಭದಲ್ಲಿ ವಿವರಣೆಯನ್ನು ಕೊಡಲು ತಯಾರಾಗಿದ್ದೇನೆ. ಇವತ್ತು ಸರ್ಕಾರದಿಂದ ನಾಗರಿಕರಿಗೆ ಅನೇಕ ಸೇವೆಗಳನ್ನು ವಿವಿಧ ಇಲಾಖೆಗಳ ಮೂಲಕ ಕೊಡುತ್ತಿದ್ದೇವೆ. ಸೇವೆಗಳನ್ನು ಕೊಡಬೇಕೆಂದಿದ್ದರೂ ಕೂಡ, ಸೇವೆಗಳು ನಿಗದಿತ ಸಮಯದಲ್ಲಿ, ನಿಗದಿತ ಗುಣಮಟ್ಟದಲ್ಲಿ ಸಿಗದಿರುವುದು ಒಂದು ಖೇದವಿದೆ. ಅದಕ್ಕೋಸ್ಕರ ನಾಗರಿಕರಿಗೆ ಒಟ್ಟು ಸರ್ಕಾರ ಮತ್ತು ಸಂಸ್ಥೆಗಳ ಬಗ್ಗೆ ಒಂದು ವಿಶ್ವಾಸಾರ್ಹತೆಯನ್ನು ಮೂಡಿಸುವುದರಲ್ಲಿ ನಾವು ಸಫಲವಾಗಿಲ್ಲ. ಸಾಮಾನ್ಯವಾಗಿ ನಾಗರೀಕರು ಕೇಳುವುದೇನೆಂದರೆ, ಕೆಲಸ